ಹೌದು. ಇಂತಹ ಹುಚ್ಚರು ಇದ್ದಾರೆ. ಆದರೆ ಎಷ್ಟು ಮಂದಿ? ತೀರ ಕಮ್ಮಿ ಸುದೈವದಿಂದ. ಇಂತಹ ಕೆಲವು ಉದಾಹರಣೆಗಳನ್ನು ತೆಗೆದುಕೊಂಡು ಜನರಲೈಸ್ ಮಾಡಬಾರದು. ನಾನು ಹೇಳಿದೆ, 'ಇದು ನಾನು ಮಾಡಿದ್ದಲ್ಲ. ಇಂತಹ ಕೆಲಸ ಮಾಡುವವರು ನಮ್ಮ ವಲಯದಲ್ಲಿ ಇಲ್ಲ. ನಾನು ಇಂಡಿಯಾದಲ್ಲಿ ಸಾಂಸ್ಕೃತಿಕ ಡೈನಾಮಿಕ್ಸ್ ಹೇಗಿದೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡುವವನು. ನಾನು ಮತ ಪ್ರಚಾರಕನಲ್ಲ. ಯಾವುದೋ ಕಾಲದಲ್ಲಿ ಯಾರೋ ಮತ ಪ್ರಚಾರಕ್ಕೆ ಬಂದಿರಬಹುದು. ಈಗ ಎಷ್ಟು ಮಂದಿ ಕ್ರೈಸ್ತರು ಇದ್ದಾರೆ ಇಂಡಿಯಾದಲ್ಲಿ? ಶೇಕಡ ಮೂರೋ ನಾಲ್ಕೋ. ಅಂದರೆ ಶೇಕಡಾ 96 ಬೇರೆ. ಯಾಕೆ ತಲೆಬಿಸಿ ಮಾಡಿಕೊಳ್ಳಬೇಕು? ನಮ್ಮ ದೇಶದಲ್ಲಿ ಕ್ರೈಸ್ತರು ತಮ್ಮ ಧರ್ಮ ಬಿಟ್ಟು ಬರುತ್ತಿದ್ದಾರೆ. ನಮ್ಮ ಸೆಂಟರ್‌ನಲ್ಲಿ ಹರೆಕೃಷ್ಣದವರು ಕೃಷ್ಣನ ಹಾಡು ಹಾಡುತ್ತಾರೆ. ನಮಗೆ ಸಾಂಸ್ಕೃತಿಕ ಭಯ ಇಲ್ಲ.

◆ **ಜರ್ಮನಿಯಲ್ಲಿರುವ ಕನ್ನಡಿಗರ ಜತೆ ಏನಾದರೂ ಸಂಬಂಧ ಬೆಳೆದಿದೆಯಾ?**

ಇಲ್ಲೊಂದು ಕನ್ನಡ ಸಂಘ ಇದೆ. ನಾನೇ ಅದರ ಸಂಸ್ಥಾಪಕ. ಆ ಕತೆ ಚೆನ್ನಾಗಿದೆ. ಒಂದು ದಿನ ನಿಲ್ದಾಣದಲ್ಲಿ ಕಾಯುತ್ತಿದ್ದೆ. ನನ್ನ ಪಕ್ಕದಲ್ಲಿ ಒಬ್ಬ ಭಾರತೀಯ ಮನುಷ್ಯ ನಿಂತಿದ್ದರು. ಕೈಯಲ್ಲಿ ಮಗು. ಮಗುವಿಗೆ, 'ಹೌದಾ, ಇದು ಬೇಕಾ' ಅಂತ ಕೇಳುತ್ತಿದ್ದರು. ಆಗ ನಾನು ಕೇಳಿದೆ, 'ನಿಮ್ಮ ಊರು ಯಾವುದು?' ಅವರು ಸುಮ್ಮನೇ ನನ್ನನ್ನೇ ದಿಟ್ಟಿಸಿದರು. 'ಅಲ್ಲರೀ ನಿಮ್ಮದೊಂದು ಊರು ಇದೆ ಅಲ್ಲವಾ? ಅದು ಯಾವುದು?' ಎಂದು ಮತ್ತೆ ಕೇಳಿದೆ. ಆಗ 'ಓ... ನಿಮಗೆ ಕನ್ನಡ ಬರುತ್ತದಾ!' ಎಂದು ಶಾಕ್ ಆಗಿ ಬಾಯಿ ತೆರೆದುಕೊಂಡು... (ನಗು) ಜರ್ಮನಿಯಲ್ಲಿ ಬಿಳಿಮನುಷ್ಯ ಕನ್ನಡದಲ್ಲಿ ಮಾತನಾಡ್ತಾನೆ ಅಂತ ನಿರೀಕ್ಷಿಸಿರಲಿಲ್ಲ. ಮಾತುಕತೆ ಶುರುವಾಯಿತು. ಎರಡು ಮೂರು ಟ್ರೈನ್ ಬಂತು ಹೋಯ್ತು. ಕೊನೆಗೆ, 'ನಿಮ್ಮನ್ನು ನೋಡಿ ನನಗೆ ಸ್ಫೂರ್ತಿ ಬಂದಿದೆ. ನಮಗೆ ಒಂದು ಕನ್ನಡದ ಸಂಘ ಬೇಕು' ಎಂದರು. ಹೌದು, ನೋಡೋಣ ಎಂದೆ. ಒಂದು ತಿಂಗಳ ನಂತರ ಸ್ಥಾಪನಸಭೆ ನಡೆಯಿತು. ಇತ್ತೀಚೆಗೆ ಸಭೆಗಳಿಗೆ ಹೆಚ್ಚು ಹೋಗಿಲ್ಲ. ಅಲ್ಲಿನ ಕಾರ್ಯಕ್ರಮಗಳು ನನಗೆ ಅಷ್ಟು ಇಷ್ಟವಾಗಿಲ್ಲ. ಕೆಟ್ಟ ಚಲನಚಿತ್ರ ತೋರಿಸುತ್ತಾರೆ. ಆದರೆ, ಕನ್ನಡ ರಾಜ್ಯೋತ್ಸವಕ್ಕೆ ಹೋಗುತ್ತೇನೆ. ಇಲ್ಲಿನ ಕನ್ನಡಿಗರು ಹೆಚ್ಚಾಗಿ ಐಟಿ ಜನ. ಬೆಂಗಳೂರು ಏನಾಗಿದೆಯೊ ಅದು ಮ್ಯೂನಿಕ್ಕಿನಲ್ಲಾಗಿದೆ. ಮ್ಯೂನಿಕ್ ಐಟಿ ಕೇಂದ್ರ.

◆ **ಜರ್ಮನಿ ನಾಜಿವಾದ, ಫ್ಯಾಸಿವಾದಗಳ ದುರಂತ ಕಂಡ ದೇಶ. ಈ ಚರಿತ್ರೆಯ ಭಾರವನ್ನು ಹೊಸ ತಲೆಮಾರು ಹೇಗೆ ಹೊರುತ್ತಿದೆ?**

ನನ್ನ ಬಾಲ್ಯ ಕೆನಡದಲ್ಲಾಯಿತು. ಯೌವನದಲ್ಲಿ ನೆದರ್‌ಲ್ಯಾಂಡ್ಸಿನಲ್ಲಿದ್ದೆ. ನಾಜಿಗಳ ಬಗ್ಗೆ ಜರ್ಮನರು ಏನು ಭಾವಿಸುತ್ತಾರೆ ಅಂತ ಸರಿಯಾಗಿ ಗೊತ್ತಿರಲಿಲ್ಲ. ಜರ್ಮನಿಗೆ ವಿದ್ಯಾರ್ಥಿಯಾಗಿ ಬಂದ ಮೇಲೆ ಇದು ಸ್ಪಷ್ಟವಾಗಿ ಕಾಣಿಸಿತು. ಸ್ವಲ್ಪ ಭಯ–ಅಸಹ್ಯ ಅನಿಸಿತು. ಪ್ರತಿವಾರ ಟೀವಿಯಲ್ಲಿ ಕಾರ್ಯಕ್ರಮ. ಅದರಲ್ಲಿ ಯಾವಾಗಲೂ ಒಂದೇ ಸಂದೇಶ – ನಾವು ಕೆಟ್ಟವರು, ನಾವು ಮಾಡಿದ್ದು ದೊಡ್ಡ ಅಪರಾಧ, ಇದನ್ನು ಸರಿಪಡಿಸಲು ಸಾಧ್ಯವೇ ಇಲ್ಲ ಇತ್ಯಾದಿ. ಒಬ್ಬ ಜರ್ಮನ್ ಹುಡುಗ ಪ್ರತಿವಾರ ಇದನ್ನು ನೋಡಿದರೆ, ಅವನಿಗೆ ಅವನ ಬಗ್ಗೆ ಯಾವ ಭಾವನೆ ಮೂಡಬಹುದು? ಈಗ ಪರಿಸ್ಥಿತಿ ಬದಲಾಗಿದೆ. ಶಾಲೆಗಳಲ್ಲಿ ಇತಿಹಾಸದ ಪಾಠ ನಡೆಯುತ್ತಿದೆ. ನಾನು ಆ ಕಾಲದಲ್ಲಿ ಬಾಳಲಿಲ್ಲ. ನನಗೂ ಅದಕ್ಕೂ ಸಂಬಂಧವೇ ಇಲ್ಲ. ನನ್ನ ತಂದೆ–ಅಜ್ಜ ಆ ಕಾಲದಲ್ಲಿ ಬದುಕಿದ್ದರೆ ನಾನು ಕೂಡ ಕೆಟ್ಟವನಾ? ನಮ್ಮ ಪೂರ್ವಜರು ಹೀಗೆ ಯುದ್ಧ ಮಾಡಿದರು. ಅವರಲ್ಲಿ ಸಾಕಷ್ಟು ಜನ